

# ಮತ್ತೆ ಸಿನಿಮಾಗಳತ್ತ ಮೇಘನಾ

ಕೆಲ ವರ್ಷಗಳ ಬ್ರೇಕ್‌ನಿಂದ ಸಿನಿಮಾರಂಗದತ್ತ ಮತ್ತೆ ಹೊರಳಿರುವ ಮೇಘನಾ ರಾಜ್, ಇದೀಗ ಪೂರ್ಣಪ್ರಮಾಣದಲ್ಲಿ ತಮ್ಮನ್ನು ಸಿನಿಮಾಗಳಲ್ಲಿ ತೊಡಗಿಸಿಕೊಳ್ಳಲು ಉತ್ಸುಕರಾಗಿದ್ದಾರೆ.

ಚಿರಂಜೀವಿ ಸರ್ಜಾ ಸಾವು, ಅದರ ನಂತರ ಮಗುವಿನ ಪಾಲನೆ ಕಾರಣಕ್ಕೆ ಕೆಲ ಕಾಲ ಸಿನಿಮಾರಂಗದಿಂದ ದೂರವುಳಿದಿದ್ದರು ಮೇಘನಾ. ಈಚೆಗೆ 'ತತ್ಸಮ ತದ್ಭವ' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದು, ಬೇರೆ ಬೇರೆ ಜಾನರ್‌ನ ಸಿನಿಮಾಗಳಲ್ಲಿ ಬಣ್ಣ ಹಚ್ಚುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, 'ನನ್ನ ಬದುಕು ಎಂದಿಗೂ ನಿರೀಕ್ಷಿಸಿರದ ತಿರುವು ಪಡೆದುಕೊಂಡಿತು. ಮಗನ ಜವಾಬ್ದಾರಿಯನ್ನು ನಾನೊಬ್ಬಳೇ ಹೊರಬೇಕಾಗಿದ್ದ ಕಾರಣ ಬ್ರೇಕ್ ತೆಗೆದುಕೊಳ್ಳುವುದು ಅವಶ್ಯಕವಾಗಿತ್ತು. ಈಗ ಮತ್ತೆ ಕೆಲಸದತ್ತ ಬಂದಿದ್ದೇನೆ. ಸೆಟ್‌ಗೆ ಮರಳಿರುವುದು ಖುಷಿಯಾಗಿದೆ' ಎಂದಿದ್ದಾರೆ.

ಇಷ್ಟು ವರ್ಷಗಳ ಅಂತರದ ನಂತರ, ಸಿನಿಮಾರಂಗ ತಮ್ಮನ್ನು ಸ್ವಾಗತಿಸಿದ ರೀತಿಯ ಬಗ್ಗೆಯೂ ಸಂತಸ ವ್ಯಕ್ತಪಡಿಸಿದ್ದಾರೆ.

'ರಾಯನ್ ಹುಟ್ಟಿ ಒಂದೂವರೆ ವರ್ಷದ ನಂತರ, ಒಂದು ಎಜುಕೇಷನ್ ಆ್ಯಪ್ ಜಾಹೀರಾತಿನಲ್ಲಿ ಕಾಣಿಸಿಕೊಂಡೆ. ಈ ಚಿತ್ರಗಳನ್ನು ನನ್ನ ಫ್ರೆಂಡ್ ಗ್ರೂಪ್‌ನಲ್ಲಿ ಹಾಕಿದಾಗ, ಆ ಅನುಭವದಿಂದ ನನಗೆ ದಕ್ಕಿರುವ ಖುಷಿಯನ್ನು ಅವರು ಗುರುತಿಸಿದರು. ನಾನು ಸೆಟ್‌ಗೆ ಬಂದು ಮತ್ತೆ ಕ್ಯಾಮೆರಾ ಎದುರಿಸುವಾಗ ನನಗೆ ಎಲ್ಲವೂ ಪರಿಚಿತ ಎಂದೇ ಅನ್ನಿಸಿತು. ಸೆಟ್‌ನಲ್ಲಿದ್ದರೆ ನಾನು ಖುಷಿಖುಷಿಯಾಗಿರುತ್ತೇನೆ ಎನಿಸಿತು' ಎಂದಿದ್ದಾರೆ.

'ಎರಡು ತಿಂಗಳ ನಂತರ ಪನ್ನಗ, ಒಂದು ಸಿನಿಮಾದೊಂದಿಗೆ ನನ್ನ ಬಳಿ ಬಂದರು. ನಾನಿದರಲ್ಲಿ ನಟಿಸಬೇಕು ಎಂದರು. ಈ ನೆಪದೊಂದಿಗೆ ನಾನು ಮತ್ತೆ ಸಿನಿಮಾರಂಗದತ್ತ ಮರಳಿದೆ. ಇಲ್ಲಿಯೇ ಸಂಪೂರ್ಣ ತೊಡಗಿಕೊಳ್ಳುವ ಮನಸ್ಸು ನನ್ನದು' ಎಂದು ಹೇಳಿದ್ದಾರೆ. ■

# ಸ್ವಾತಂತ್ರ್ಯಪೂರ್ವ ಕಥೆಯ ನಾಯಕನಾಗಿ ಡಾರ್ಲಿಂಗ್ ಕೃಷ್ಣ

ಈಚೆಗೆ ತೆರೆಕಂಡು ಯಶಸ್ಸು ಪಡೆದ 'ಕೌಸಲ್ಯ ಸುಪ್ರಜಾ ರಾಮಾ' ಸಿನಿಮಾ ನಂತರ, ರೊಮ್ಯಾಂಟಿಕ್ ಬಾಯ್ ಇಮೇಜ್‌ನಿಂದ ಹೊರಬರಲು ನಿರ್ಧರಿಸಿರುವ ನಟ ಡಾರ್ಲಿಂಗ್ ಕೃಷ್ಣ, ಇದೀಗ ಸ್ವಾತಂತ್ರ್ಯಪೂರ್ವ ಕಥೆಯ ಸಿನಿಮಾದಲ್ಲಿ ನಟನೆಗೆ ತಯಾರಿ ನಡೆಸುತ್ತಿದ್ದಾರೆ.

ಇದುವರೆಗೂ ಫ್ಯಾಮಿಲಿ ಎಂಟರ್‌ಟೇನರ್ ಹೀರೊ ಎಂದು ಕರೆಸಿಕೊಂಡಿದ್ದ ಡಾರ್ಲಿಂಗ್ ಕೃಷ್ಣ, ಆ ಇಮೇಜ್‌ನಿಂದ ಹೊರಬರಲು ವಿಭಿನ್ನ ಕಥೆಯ ಸಿನಿಮಾಗೆ ಸಹಿ ಹಾಕಿದ್ದಾರೆ.

'ಹಲಗಲಿ' ಎಂಬ ಸಿನಿಮಾಗೆ ಅವರು ಸಹಿ ಹಾಕಿದ್ದು, ಈ ಸಿನಿಮಾ, 1940ರ ಕಾಲಘಟ್ಟದ, ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ಸಿನಿಮಾ ಆಗಿರುವುದಾಗಿ ತಿಳಿದುಬಂದಿದೆ. 'ಕೃಷ್ಣ ತುಳಸಿ' ಸಿನಿಮಾ ನಿರ್ದೇಶನ ಮಾಡಿದ್ದ ಸುಕೇಶ್ ನಾಯಕ್ ಈ ಸಿನಿಮಾ ನಿರ್ದೇಶನದ ಹೊಣೆ ಹೊತ್ತಿದ್ದಾರೆ.

ಉತ್ತರ ಕರ್ನಾಟಕದ ಹಲಗಲಿ ಜನರ ಶೌರ್ಯದ ಮೇಲೆ ಈ ಸಿನಿಮಾ ಬೆಳಕು ಚೆಲ್ಲಲಿದೆ. ಬೇಡ ಸಮುದಾಯಕ್ಕೆ ಸೇರಿದ ಜನ ಬ್ರಿಟಿಷರ ವಿರುದ್ಧ ಹೋರಾಡಿದ ಕಥನ ಇದಾಗಿದೆ.

ಬಹುಭಾಷೆಗಳಲ್ಲಿ ಸಿನಿಮಾ ಹೊರತರುವ ಆಲೋಚನೆಯಿದ್ದು, ಡಾರ್ಲಿಂಗ್ ಕೃಷ್ಣ ಅವರ ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಪ್ರಾಜೆಕ್ಟ್ ಕೂಡ ಆಗಲಿದೆ ಎಂದು ಮಾಹಿತಿ ನೀಡಿದೆ ಚಿತ್ರತಂಡ. ಸದ್ಯ ಈ ಸಿನಿಮಾಗಾಗಿ ತಯಾರಿ ಆರಂಭಿಸಿರುವ ಕೃಷ್ಣ, ತಮ್ಮ ದೇಹವನ್ನೂ ಹುರಿಗೊಳಿಸುತ್ತಿದ್ದಾರೆ.

ಇದರೊಂದಿಗೆ, 'ಶುಗರ್ ಫ್ಯಾಕ್ಟರಿ' ಸಿನಿಮಾ ಬಿಡುಗಡೆಯನ್ನು ಎದುರು ನೋಡುತ್ತಿದ್ದಾರೆ. ನವೆಂಬರ್‌ನಲ್ಲಿ ಈ ಸಿನಿಮಾ ತೆರೆಗೆ ಬರಲಿದ್ದು, ಸೋನಾಲ್ ಮೊಂತೆರೊ ಹಾಗೂ ಅದ್ವಿತಿ ಶೆಟ್ಟಿ ಮುಖ್ಯಪಾತ್ರದಲ್ಲಿದ್ದಾರೆ. ■



